"ನುಡಿದರೆ ಮುತ್ತಿನ ಹಾರದಂತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು,
ನುಡಿದರೆ ಲಿಂಗ ಮೆಚ್ಚಿ ಹೌದು, ಹೌದು ಎನ್ನಬೇಕು.
ನುಡಿದಂತೆ ನಡೆಯದಿದ್ದರೆ ಕೂಡಲಸಂಗಮದೇವನೆಂತು ಮೆಚ್ಚುವನಯ್ಯ"

ಈ ನೀತಿಯನ್ನು ಅನುಸರಿಸಿಕೊಂಡು ಹೋಗಬೇಕು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಶಂಕರಲಿಂಗೇಗೌಡರು ಶತಾಬ್ದಿ ಎಕ್ಸ್‌ಪ್ರೆಸ್ ತರಹ ವಚನ ಹೇಳಿದರೆ, ಸದಸ್ಯರಿಗೆ ಅದು ಗೊತ್ತಾಗುವುದು ಹೇಗೆ ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ನಾನು ಮೊದಲಿನಿಂದಲೂ ಆಶುಭಾಷಣ ಮತ್ತು ಚರ್ಚಾ ಸ್ಪರ್ಧೆಯಿಂದಲೇ ಪ್ರಾರಂಭ ಮಾಡಿಕೊಂಡೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ನೀವು ನಿಜವಾದ ವಚನ ಹೇಳುತ್ತೀರೋ ಅಥವಾ ಚರ್ಚಾ ಹೇಳುತ್ತೀರೋ ಎಂಬ ಅನುಮಾನ ಶುರುವಾಗಿ ಬಿಟ್ಟಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಎಷ್ಟು ದಿವಸದಲ್ಲಿ ಕಾರ್ಖಾನೆ ತೆಗೆಯುತ್ತಾರೆ ಎಂಬ ಬಗ್ಗೆ ದಯಮಾಡಿ ಉತ್ತರ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸದಸ್ಯರ ಸಂಶಯವನ್ನು ನಾವು ತೆಗೆದುಕೊಂಡಿದ್ದೇವೆ.

ರಾಜ್ಯದಲ್ಲಿ ರೇಷ್ಮೆ ನೂಲು ಬಿಚ್ಚುವ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸುವುದು

56(329) ಶ್ರೀ ಜಿ.ವಿ. ಶ್ರೀರಾಮರೆಡ್ಡಿ.(ಬಾಗೇಪಲ್ಲಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ರೇಷ್ಮೆ ನೂಲು ಬಿಚ್ಚುವ ಕಾರ್ಖಾನೆಗಳು ನಷ್ಟದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಅವುಗಳಲ್ಲಿ ನಷ್ಟವನ್ನು ಕಡಿಮೆ ಮಾಡುವ ಸಲುವಾಗಿ ಐದು ಕಾರ್ಖಾನೆಗಳನ್ನು ವಿಲೀನಗೊಳಿಸಿ, ಎರಡು ಘಟಕಗಳಾಗಿ ಈ ಕೆಳಗಿನಂತೆ ಪರಿವರ್ತಿಸಲು ಉದ್ದೇಶಿಸಿದೆ.

- ಕೊಳ್ಳೇಗಾಲದ ಸರ್ಕಾರಿ ರೇಷ್ಮೆ ಕಾರ್ಖಾನೆಗಳನ್ನು ಮಾಂಬಳ್ಳಿ ಸರ್ಕಾರಿ ರೇಷ್ಮೆ ಕಾರ್ಖಾನೆಯೊಂದಿಗೆ.
- ಚಾಮರಾಜನಗರದ ಸರ್ಕಾರಿ ರೇಷ್ಮೆ ಕಾರ್ಖಾನೆಯನ್ನು ಸಂತೆಮರಳ್ಳಿ ಸರ್ಕಾರಿ ರೇಷ್ಮೆ ಕಾರ್ಖಾನೆಯೊಂದಿಗೆ
- ಸರ್ಕಾರಿ ರೇಷ್ಮೆ ಹುರಿ ಮತ್ತು ನೇಯ್ಗೆ ಕಾರ್ಖಾನೆ, ಮುಡಿಗುಂಡಂ, ಇದರ ಸಿಬ್ಬಂದಿ/ ಕಾರ್ಮಿಕರನ್ನು ಮಾಂಬಳ್ಳಿ ಮತ್ತು ಸಂತೆಮರಳ್ಳಿ ಕಾರ್ಖಾನೆಗಳಿಗೆ ಹಂಚಿಕೆ ಮಾಡುವುದು.

ಈ ನಾಲ್ಕೂ ಕಾರ್ಖಾನೆಗಳು ಅವುಗಳ ಸಾಮರ್ಥ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿನ ಯಂತ್ರೋಪಕರಣಗಳನ್ನು ಹಾಗೂ ಕಾರ್ಮಿಕರನ್ನು

ಒಟ್ಟುಗೂಡಿಸಿ, ಅವಶ್ಯವಿದ್ದಲ್ಲಿ ಯಂತ್ರೋಪಕರಣಗಳನ್ನು ಮೇಲ್ದರ್ಜೆಗೇರಿಸಿ, ಹಬೆ ಹಾಗೂ ವಿದ್ಯುತ್ತಿನ ನಿಯಂತ್ರಿತ ಬಳಕೆಯಿಂದ ಉತ್ಪಾದನಾ ವೆಚ್ಚವನ್ನು ತಗ್ಗಿಸಿ, ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಲು ಉದ್ದೇಶಿಸಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ರೇಷ್ಮೆ ಫಿಲೇಷರ್ಸ್ ಫ್ಯಾಕ್ಟರಿಗಳು ಕರ್ನಾಟಕದಲ್ಲಿ ಮುಚ್ಚಿ ಹೋಗುತ್ತಿವೆ. ಮುಚ್ಚಿ ಹೋಗತಕ್ಕ ಫ್ಯಾಕ್ಟರಿಗಳ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಆದರೆ, ಈ ಕಾರ್ಖಾನೆಗಳು ಮುಚ್ಚಿಹೋಗಲಿಕ್ಕೆ ಕಾರಣ ಏನು ? ಇದರಿಂದ ಸಾವಿರಾರು ಜನ ಬಡ ನೇಕಾರರು ಮತ್ತು ಕಾರ್ಮಿಕರು ಕೆಲಸ ಇಲ್ಲದೇ ಬೀದಿ ಪಾಲಾಗಿದ್ದಾರೆ. ಅದರ ಬಗ್ಗೆ ಉತ್ತರದಲ್ಲಿ ಏನೂ ಸ್ಪಷ್ಟವಾಗಿ ಇಲ್ಲ. ಮತ್ತೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ನಾಲ್ಕು ಕಾರ್ಖಾನೆಗಳು ಸಾಮರ್ಥ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಇವುಗಳಲ್ಲಿನ ಯಂತ್ರೋಪಕರಣಗಳನ್ನು ಹಾಗೂ ಕಾರ್ಮಿಕರನ್ನು ಒಟ್ಟುಗೂಡಿಸಿ ಅವಶ್ಯವಿದ್ದಲ್ಲಿ ಯಂತ್ರೋಪಕರಣಗಳನ್ನು ಮೇಲ್ದರ್ಜೆಗೇರಿಸಿ ಹಬೆ ಹಾಗೂ ವಿದ್ಯುತ್ತಿನ ನಿಯಂತ್ರಿಕ ಬಳಕೆಯಿಂದ ಉತ್ಪಾದನಾ ವೆಚ್ಚವನ್ನು ತಗ್ಗಿಸಿ, ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಲು ಉದ್ದೇಶಿಸಿದೆ ಎಂದು ಹೇಳಿದ್ದಾರೆ. ಇಲ್ಲಿ ಅವಶ್ಯಕತೆ ಇರುವುದನ್ನು ಬಿಟ್ಟು ಬೇರೆಯದನ್ನು ಹೇಳಿದ್ದಾರೆ. ಈ ಕಾರ್ಖಾನೆಗಳು ಪುನಶ್ಚೇತನವಾಗಬೇಕಾದರೆ ಮುಖ್ಯವಾಗಿರತಕ್ಕಂಥ ಅಂಶ ನೂಲಿನ ಪ್ರಶ್ನೆ. ಈ ದಾರದ ರೇಟ್ ಹೆಚ್ಚು ಕಡಿಮೆಯಾಗಿರತಕ್ಕ ಕಾರಣಕ್ಕೋಸ್ಕರ ಮತ್ತೆ ಅಂತರ ಹೆಚ್ಚಾಗಿರತಕ್ಕ ಕಾರಣಕ್ಕೋಸ್ಕರ ಅದರ ದರ ಹೆಚ್ಚಾಗಿ ಅದನ್ನು ನಡೆಸಲಿಕ್ಕಾಗದೇ ಇರತಕ್ಕ ಪರಿಸ್ಥಿತಿ ಉದ್ಭವವಾಗಿದೆ. ಮೂಲಭೂತವಾಗಿ ಅದನ್ನು ಸರಿಪಡಿಸಲಿಕ್ಕೆ ಏನು ಕ್ರಮ ತೆಗೆದುಕೊಂಡಿದ್ದೇವೆಂದು ಇದರಲ್ಲಿ ಹೇಳಲಿಲ್ಲ. ಬರೀ ನಾಲ್ಕು ಕಾರ್ಖಾನೆಗಳನ್ನು ಒಂದುಗೂಡಿಸಿ ಯಂತ್ರೋಪಕರಣಗಳನ್ನು ಮೇಲ್ದರ್ಜೆಗೆ ಏರಿಸಿಬಿಡುವುದರಿಂದ ಅದನ್ನು ನಡೆಸಲಿಕ್ಕಾಗುವುದಿಲ್ಲ. ಅದನ್ನು ನಡೆಸಬೇಕಾದರೆ ಮೂಲಭೂತವಾಗಿ ಕಚ್ಚಾವಸ್ತುಗಳ ಬೆಲೆ ಏನಿದೆ. ಅದು ಇವತ್ತು ಜಾಸ್ತಿಯಾಗಿಬಿಟ್ಟಿದೆ, ಅದರಿಂದ ಮುಚ್ಚಿಹೋಗಿರತಕ್ಕಂಥಾದ್ದು, ಬೇರೆ ಕಾರಣಗಳಿಂದ ಮುಚ್ಚಿ ಹೋಗಿರತಕ್ಕಂಥಾದ್ದಲ್ಲ. ಚಾಮರಾಜನಗರ ಮತ್ತು ಕೊಳ್ಳೆಗಾಲ ಈ ಕಡೆ ಇರತಕ್ಕಕಂಥ ಕಾರ್ಖಾನೆಗಳು, ದೊಡ್ಡಬಳ್ಳಾಪುರದಲ್ಲಿ ಹಲವಾರು ಇವೆ. ಕೋಲಾರ ಜಿಲ್ಲೆ ಶಿಡ್ಲಘಟ್ಟದಲ್ಲಿ ಇದೆ. ಎಲ್ಲಾ ಕಡೆ ಇರತಕ್ಕ ಈ ಫಿಲೇಜರುಗಳು ನಿಂತು ಹೋಗುವುದಕ್ಕೆ ಮುಖ್ಯ ಕಾರಣ ರಾ ಮೆಟೀರಿಯಲ್ ಕಾಸ್ಟ್ ಜಾಸ್ತಿಯಾಗಿದೆ. ಯಂತ್ರೋಪಕರಣಗಳ ಸಮಸ್ಯೆ ಅಲ್ಲ. ಅದನ್ನು ಬಿಟ್ಟು ನೀವು ಉತ್ತರ ಹೇಳಿದ್ದೀರಿ. ಆದ್ದರಿಂದ, ಇದನ್ನು ಪುನಶ್ಚೇತನಗೊಳಿಸಬೇಕಾದರೆ ಮುಖ್ಯವಾಗಿ ಬೇಕಾಗಿರುವುದು ರಾ ಮೆಟೀರಿಯಲ್ ಕಡಿಮೆ ದರಕ್ಕೆ ನೇಕಾರರಿಗೆ ಮತ್ತು ಆ ಕೆಲಸಗಾರರಿಗೆ ಸಿಕ್ಕಿದರೆ ಒಳ್ಳೆಯದು. ಹಾಗಾಗಿ ನೀವು ಅಗತ್ಯ ಕ್ರಮ ಏನು ತೆಗೆದುಕೊಂಡಿದ್ದೀರಿ ? ನಾಲ್ಕು ಕಾರ್ಖಾನೆಗಳನ್ನು ಒಟ್ಟುಗೂಡಿಸಿ ಅವುಗಳನ್ನು ನಡೆಸುವುದಕ್ಕಾಗುವುದಿಲ್ಲ. ಮತ್ತೆ ಕೆಲಸ ಕಳೆದುಕೊಂಡಿರತಕ್ಕ ಸಾವಿರಾರು ಜನ ಕಾರ್ಮಿಕರ ಪ್ರಶ್ನೆ.

ಅಧ್ಯಕ್ಷರು : ನೀವು ಕೇಳುತ್ತಿದ್ದೀರೋ. ಏನು ಕೇಳುತ್ತಿದ್ದೀರೋ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿರತಕ್ಕಂಥ ಅಂಶ ಸಂಪೂರ್ಣವಾಗಿ ಸರಿ ಇದೆ. ಅದನ್ನು ಸರಿಪಡಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕ್ರಮ ತೆಗೆದುಕೊಳ್ಳುತ್ತೇನೆ ಎಂದರೆ ಏನು ಕ್ರಮ ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಮ್ಮ ಜಿಲ್ಲೆ, ನಿಮ್ಮ ಜಿಲ್ಲೆ, ಚಾಮರಾಜನಗರ, ಮಂಡ್ಯ, ತುಮಕೂರು ಈ ಜಿಲ್ಲೆಗಳಲ್ಲೆಲ್ಲಾ ಸಿರಿಕಲ್ಚರ್ ಇಂಡಸ್ಟ್ರೀ ವಿಚಾರದಲ್ಲಿ ರೀಲರ್ಸ್ ತೊಂದರೆ ಇರತಕ್ಕಂಥ ಆದ್ದು ಮತ್ತು ಗೂಡಿನ ಬೆಲೆ ಕಡಿಮೆಯಾಗಿರತಕ್ಕಂಥಾದ್ದು, ಚೈನಾದಿಂದ ಬರುತ್ತಾ ಇರತಕ್ಕಂಥ ರೇಷ್ಮೆ, ಇದರ ಮೇಲೆ ಇರತಕ್ಕಂಥ ಕ್ರಮಗಳು/ಇವೆಲ್ಲಾ ಒಂದಕ್ಕೊಂದು ಚೈನ್ ಇದ್ದಹಾಗೆ. ಇವೆಲ್ಲಾ ಒಂದಕ್ಕೊಂದು ಕೊಂಡಿಗಳು, ಇದನ್ನು ಸರಿ ಮಾಡಿಸಬೇಕಾದರೆ. ಮೊದಲು ಗೂಡಿನ ಬೆಲೆ 120, 130 ರೂಪಾಯಿಗಳು ಇರಬೇಕು. ಆದಾದ ಮೇಲೆ ರೀಲರ್ಸ್‌ಗಳು ಬದುಕಬೇಕು. ರೀಲರ್ಸ್‌ಗಳು ಬದುಕಬೇಕೆಂದರೆ ಫಿಲೇಚರ್ಸ್ ಬದುಕಬೇಕು. ಆದಾದ ಮೇಲೆ ವೀವರ್ಸ್ ಬದುಕಬೇಕಾಗುತ್ತದೆ. ಆದಾದ ಮೇಲೆ ಮಾರ್ಕೆಟಿಂಗ್ ಬೇಕಾಗುತ್ತದೆ. ಏನು ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಹೇಳಿದರೆ. ಇವೆಲ್ಲವೂ ಸಹಿತ ರೀಲರ್ಸ್ ಇವತ್ತು 15 ಸಾವಿರ ಇದ್ದವರು 3 ಸಾವಿರ ಜನಕ್ಕೆ ಇಳಿದಿದ್ದಾರೆ. ರೀಲಿಂಗ್ ಬಿಟ್ಟುಬಿಟ್ಟಿದ್ದಾರೆ. ಆ ಗೂಡು ತೆಗೆದುಕೊಳ್ಳುವವರೇ ಇಲ್ಲ. ಈ ಗೂಡು ತೆಗೆದುಕೊಳ್ಳಿ, ತೆಗೆದುಕೊಳ್ಳಿ ಎಂದು ಹೇಳುತ್ತಾ ಇದ್ದೇವೆ. ನಾವು ಇದನ್ನಾದರೂ ಏಕೆ ಮಾಡಿರತಕ್ಕಂಥಾದ್ದು. ಮಾರ್ಕೆಟ್ ಇಂಟರ್‌ವೆನ್‌ಷನ್‌ಗೆ ಎಂದು ನಾವು ಮಾಡಿರತಕ್ಕಂಥಾದ್ದು. ಇಲ್ಲಿ ತಾವು ಎದ್ದುನಿಂತು ಪ್ರಶ್ನೆ ಕೇಳಿದ್ದೀರಿ, ಸರ್ಕಾರದ ಗಮನವನ್ನು ಸೆಳೆದಿದ್ದೀರಿ, ನಿಮಗೆ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದೇವೆ. ಇದನ್ನು ಸರಿಪಡಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದರೆ ಇದರ ಬಗ್ಗೆ ಫೈನಾನ್‌ಷಿಯಲ್ ಇಂಪ್ಲಿಕೇಷನ್ ಇದೆ. ನೀವು ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡಬೇಕೆಂಬ ದೃಷ್ಟಿಯಿಂದ ಹೇಳಿದ್ದೀರಿ. ರೈತರ ಹಿತವನ್ನು ಕಾಪಾಡುವ ದೃಷ್ಟಿಯಿಂದ ಸಹಿತ ಹೇಳಿದ್ದೀರಿ. ನೇಕಾರರ ಹಿತವನ್ನು ಕಾಪಾಡಬೇಕೆಂಬ ಉದ್ದೇಶ ಇಟ್ಟುಕೊಂಡಿದ್ದೀರಿ. ಇವೆಲ್ಲಾ ವಿಚಾರಗಳೂ ಇರತಕ್ಕಂಥ ಸನ್ನಿವೇಶದಲ್ಲಿ ನಾವೆಲ್ಲರೂ ಸಮಗ್ರ ವಿಚಾರ ಮಾಡಬೇಕಾಗುತ್ತದೆ. ಏಕೆಂದರೆ, ಮೊನ್ನೆ ಕೇಂದ್ರ ಸರ್ಕಾರದ ರೇಷ್ಮೆ ಇಲಾಖೆಗೆ ಸಂಬಂಧಪಟ್ಟಂಥ ಸಚಿವರಾದ ಮಾನ್ಯ ಶಂಕರ್‌ಸಿಂಗ್ ವಾಘೇಲಾರವರು ಬಂದಿದ್ದರು. ಆ ಸಂದರ್ಭದಲ್ಲಿ ನಾನು ನೇರವಾಗಿ ಇದನ್ನೆಲ್ಲಾ ಮಾತನಾಡಿದ್ದೇನೆ. ಕೇಂದ್ರ ಸರ್ಕಾರದ ಸಹಕಾರವನ್ನು ಸಹಿತ ತೆಗೆದುಕೊಂಡು, ಇದನ್ನು ಸರಿಪಡಿಸಲಿಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳಿಗೆ ಸಬ್ಸಿಡಿ ದರವನ್ನು ರದ್ದುಗೊಳಿಸಿರುವುದು

57(332) ಶ್ರೀ ಸಿ.ಟಿ. ರವಿ.(ಚಿಕ್ಕಮಗಳೂರು) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳಿಗೆ ನಿಗದಿಗೊಳಿಸಲಾಗಿದ್ದ ಸಬ್ಸಿಡಿ ದರವನ್ನು ರದ್ದುಗೊಳಿಸಲು ತೀರ್ಮಾನ ಕೈಗೊಂಡಿರುವುದು ನಿಜವೇ ;

ಆ) ಈ ತೀರ್ಮಾನಕ್ಕೆ ಕಾರಣಗಳೇನು ;

ಇ) ಇಲ್ಲದಿದ್ದಲ್ಲಿ ಖಾದಿಗೆ ರಿಯಾಯಿತಿ ನೀಡದಿರುವುದರ ಬಗ್ಗೆ ಸರ್ಕಾರದ ನಿಲುವೇನು ;

ಈ) ಸದರಿ ಗ್ರಾಮೋದ್ಯೋಗಗಳ ಅಭಿವೃದ್ಧಿಗೆ ಸರ್ಕಾರವು ವಿಶೇಷ ಕಾರ್ಯ ಯೋಜನೆಗಳನ್ನು ಕೈಗೊಳ್ಳುವುದೇ ;

ಉ) ಇತ್ತೀಚೆಗೆ ರೈಲ್ವೆ ಇಲಾಖೆಯ ಸೂಚನೆಯಂತೆ ರೈಲುಗಳಲ್ಲಿ ಕಾಫಿ-ಟೀ ಕುಡಿಯಲು ಬಳಸುವ ರೈಲುಗಳಲ್ಲಿ ಮಣ್ಣಿನ ಕುಡಿಕೆಗಳನ್ನು ವಿತರಿಸುವಂತೆ ತಿಳಿಸಿರುವುದರಿಂದ ಈ ಸರ್ಕಾರವು ಆ ಉದ್ದಿಮೆಯನ್ನು ಬಲಪಡಿಸಲು ಖಾದಿ ಮಂಡಲಿಯ ಮತಿಯಿಂದ ಯಾವ ಕ್ರಮ ಕೈಗೊಳ್ಳುವುದು;